**<u>ಸಾಕ್ಷಿಯನ್ನು ದಿನಾಂಕಃ 29.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ಡಿ.ಸಿ, ವಕೀಲರಿಂದಃ</u>**

ನಾನು ಡಿಪ್ಲೋಮೊವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 2010 ರಿಂದ 2015 ರವರೆಗೆ ಹೆಡಿಯಾಲ ಹುಲಿ ಸಂರಕ್ಷಿತ ಅರಣ್ಯ ವಲಯದಲ್ಲಿ ಕೆಲಸ ಮಾಡಿರುತ್ತೇನೆ. ಹೆಡಿಯಾಲದಿಂದ ಕಾಳನಮಂಟಿ ಅರಣ್ಯ ಪ್ರದೇಶಕ್ಕೆ ಸುಮಾರು 7 ಕಿ.ಮೀ ದೂರ ಇರುತ್ತದೆ. ಕರಿಕಲ್ಲುಮುಂಟಿ ಕಾಳನಮಂಟಿ ಅರಣ್ಯ ಪ್ರದೇಶದ ಪಕ್ಕದಲ್ಲಿರುತ್ತದೆ. ಕೊರಕಲಾಡಿ ಅರಣ್ಯ ಪ್ರದೇಶದ ಪಕ್ಕದಲ್ಲಿರುವ ಕಳ್ಳಬೇಟೆ ತಡೆ ಶಿಬಿರದಿಂದ ನಾವು ಗಸ್ತಿಗೆ ಹೋಗುತ್ತಿದ್ದೆವು. ಆ ದಿವಸ ನಾಲ್ಕು ಜನ ಸಿಬ್ಬಂದಿಗಳಿದ್ದರು. ಗಸ್ತು ಕರ್ತವ್ಯಕ್ಕೆ ಯಾರು ನೇಮಿಸುವುದಿಲ್ಲ, ನಾವೇ ಪ್ರತಿದಿನ ಗಸ್ತು ಕರ್ತವ್ಯ ಮಾಡುತ್ತೇವೆ. ಗಸ್ತು ಕರ್ತವ್ಯ ಮಾಡುವಾಗ ಯಾವುದೇ ತೊಂದರೆ ಬಂದಲ್ಲಿ ಹೆಡಿಯಾಲದಲ್ಲಿರುವ ಉಪ ವಲಯ ಅರಣ್ಯಾಧಿಕಾರಿಯವರಿಗೆ ತಿಳಿಸುತ್ತೇವೆ. ಕಳ್ಳಬೇಟೆ ತಡೆ ಶಿಬಿರದಿಂದ ಉಪ ವಲಯ ಅರಣ್ಯ ಕಛೇರಿಗೆ 4 ಕಿ.ಮೀ ದೂರವಿರುತ್ತದೆ. ನಮ್ಮ ವಲಯ ಅರಣ್ಯ ಕಛೇರಿಯಲ್ಲಿ ಯಾವ ಪ್ರದೇಶಕ್ಕೆ ಗಸ್ತಿಗಾಗಿ ನೇಮಿಸಿರುತ್ತಾರೆಂದು ಡೈರಿಯಲ್ಲಿ ನಮೂದು ಮಾಡುವುದಿಲ್ಲ. ಕರಿಕಲ್ಲುಮುಂಟಿ ಪ್ರದೇಶದಲ್ಲಿ ನಾವು ಗಸ್ತು ಮಾಡುತ್ತಿದ್ದೆವು ಎಂದು ತೋರಿಸಲು ಪೊಲೀಸರು ನಮ್ಮ ಬಳಿ ಯಾವುದೇ ದಾಖಲೆಯನ್ನು ಪಡೆದಿಲ್ಲ. ದೂರನ್ನು ನಮ್ಮ ಉಪ ವಲಯ ಅರಣ್ಯಾಧಿಕಾರಿಗಳಾದ ಜಯಪ್ರಕಾಶ್ ರವರು ಬರೆದಿರುತ್ತಾರೆ. ದೂರಿನಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. 2014 ರ ಸಮಯದಲ್ಲಿ ನಾವು ಗಸ್ತು ಮಾಡುತ್ತಿದ್ದ ಅರಣ್ಯ ಪ್ರದೇಶದ ಸುತ್ತ ಆನೆಕಂದಕವನ್ನು ಮಾಡಿದ್ದರು. ಆನೆಕಂದಕದಿಂದ ಹೊರಭಾಗಕ್ಕೆ ಸೋಲಾರ್ ತಂತಿಬೇಲಿಯನ್ನು ಅಳವಡಿಸಿದ್ದರು. ಸದರಿ ಸೋಲಾರ್ ತಂತಿಬೇಲಿ 2 1/2 ಮೀಟರ್ ಎತ್ತರವಿತ್ತು. ಸದರಿ ಸೋಲಾರ್ ತಂತಿಬೇಲಿಗೆ

ಯಾವಾಗಲೂ ಸೋಲಾರ್ ವಿದ್ಯುತ್ ಚಾಲನೆಯಲ್ಲಿರುತ್ತದೆ. ಸೋಲಾರ್ ತಂತಿಬೇಲಿಗೆ ಯಾವುದಾದರೂ ಕಾಡುಪ್ರಾಣಿ ತಾಗಿದರೆ ನಮ್ಮ ಕಛೇರಿಯಲ್ಲಿ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ನಮ್ಮ ಕಛೇರಿಯಲ್ಲಿಟ್ಟಿರುವ ಯಂತ್ರದಿಂದ ಶಬ್ದ ಬರುತ್ತದೆ ಎಂದು ಗೊತ್ತಿದ್ದರೂ ಕೂಡ ಇಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ನನ್ನ ಜೊತೆ ಪ್ರಾಸಾ-2 ಕೂಡ ಇದ್ದರು. ದೂರಿನಲ್ಲಿ ನಾನು ಮತ್ತು ರಾಜು ಗಸ್ತಿಗೆ ಹೋಗಿದ್ದೆವೆಂದು ನಮೂದಿಸಿಲ್ಲ ಎಂದರೆ ಸರಿ. ಸುಮಾರು 200 ಮೀಟರ್ ದೂರದಿಂದ ಮರ ಕಡಿಯುವ ಶಬ್ದ ಕೇಳಿಸಿರುತ್ತದೆ. ನಾವು ಹೋಗಿದ್ದ ಜಾಗದಲ್ಲಿ ನೀಲಗಿರಿ, ಕಗ್ಗಲಿ ಮರ ಮತ್ತು ಇತರೆ ಮರಗಳಿರುತ್ತವೆ. ಸದರಿ ಮರಗಳ ಸುತ್ತಳತೆ ಸುಮಾರು ಅರ್ಧ ಮೀಟರ್ ಇರುತ್ತದೆ. ಆರೋಪಿಗಳು ಯಾವ ಜಾತಿಯ ಮರಗಳನ್ನು ಕಡಿಯುತ್ತಿದ್ದರು ಎಂದು ನಿಪಿ-1 ರಲ್ಲಿ ಹೇಳಿಲ್ಲ ಎಂದರೆ ಸರಿ. ನಮ್ಮ ಅರಣ್ಯ ಪ್ರದೇಶದಲ್ಲಿ ಬೆಳೆದಿರುವ ಮರಗಳ ಪರಿಚಯವಿರುತ್ತದೆ. ಆರೋಪಿಗಳು ಯಾವುದೇ ಮರಗಳನ್ನು ಕಡಿಯದಿದ್ದರೂ ಅವರ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ದಿವಸ ಆರೋಪಿಗಳು ಯಾವ ಬಣ್ಣದ ಬಟ್ಟೆಗಳನ್ನು ಧರಿಸಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಆರೋಪಿಗಳು ಯಾವ ಜಾತಿಯ ಎಷ್ಟು ಉದ್ದದ ಮರಗಳನ್ನು ಕಡಿದಿದ್ದರು ಎಂದು ದೂರಿನಲ್ಲಿ ನಮೂದಿಸಿಲ್ಲ. ಆ ರೀತಿ ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ. ಕರಿಕಲ್ಲುಮುಂಟಿ ಅರಣ್ಯ ಪ್ರದೇಶದಲ್ಲಿರುವ ಆನೆಕಂದಕದಿಂದ ಸುಮಾರು 750 ಮೀಟರ್ ದೂರದಲ್ಲಿ ಆರೋಪಿಗಳ ಜಮೀನು ಇರುತ್ತದೆ. ಸಾಮಾನ್ಯವಾಗಿ ಕಾಡುಪ್ರಾಣಿಗಳು ಪಕ್ಕದಲ್ಲಿರುವ ವ್ಯವಸಾಯದ ಜಮೀನಿಗೆ ಬಂದು ಬೆಳೆದಿರುವ ಬೆಳೆಗಳನ್ನು ಹಾಳುಮಾಡುತ್ತವೆ ಎಂದರೆ ಸರಿ. ಆ ಸಂದರ್ಭದಲ್ಲಿ ರೈತರು ಅರಣ್ಯ ಕಛೇರಿಗೆ ಬಂದು ಧರಣಿ ಮಾಡುತ್ತಾರೆ ಎಂದರೆ ಅರ್ಜಿ ಕೊಡುತ್ತಾರೆ. ಕಾಡುಪ್ರಾಣಿಗಳು ಆರೋಪಿಗಳ ಜಮೀನಿಗೆ

ಬಂದು ಬೆಳೆಗಳನ್ನು ಹಾಳು ಮಾಡಿದ್ದರಿಂದ ಆರೋಪಿಗಳು ನಮ್ಮ ಅರಣ್ಯ ಕಛೇರಿಗೆ ಬಂದು ಗಲಾಟೆ ಮಾಡಿರುತ್ತಾರೆಂದು ದ್ವೇಷವನ್ನಿಟ್ಟುಕೊಂಡು ಆರೋಪಿಗಳ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ನಮ್ಮ ಅರಣ್ಯ ಇಲಾಖೆಗೆ ಅರ್ಜಿ ಕೊಟ್ಟಿರುತ್ತಾರೆ ಎಂದರೆ ಆ ಸಂದರ್ಭದಲ್ಲಿ ಕೊಟ್ಟಿರುವುದಿಲ್ಲ. ಆರೋಪಿಗಳು ನಮ್ಮ ಅರಣ್ಯ ಪ್ರದೇಶಕ್ಕೆ ಯಾವತ್ತೂ ಪ್ರವೇಶ ಮಾಡಿಲ್ಲ ಮತ್ತು ಅವರು ಯಾವುದೇ ರೀತಿ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಕೃತ್ಯದಿಂದ ನನಗೆ ಯಾವುದೇ ಗಾಯಗಳಾಗಿಲ್ಲ ಮತ್ತು ಸದರಿ ಗಾಯಗಳನ್ನು ನಾನೇ ಸ್ವತಃ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಗಲಾಟೆ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿದ್ದು, ಅವುಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಗಲಾಟೆ ನಡೆದ ಮರು ದಿವಸ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಪೊಲೀಸರು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.00 ಗಂಟೆವರೆಗೆ ಮಹಜರ್ ಮಾಡಿರುತ್ತಾರೆ. ಆರೋಪಿಗಳನ್ನು ಕಡಿದಿರುತ್ತಾರೆ ಎಂದು ಹೇಳಿರುವ ಮರಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಆರೋಪಿಗಳು ಕಡಿದಿರುತ್ತಾರೆ ಎಂದು ಹೇಳಿದ ಮರ 15 ಅಡಿ ಉದ್ದ ಮತ್ತು 10-15 ಸೆಂ.ಮೀಟರ್ ಸುತ್ತಳತೆ ಇತ್ತು. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ಅರಣ್ಯ ಪ್ರದೇಶಕ್ಕೆ ಪ್ರವೇಶ ಮಾಡಿ ಮರಗಳನ್ನು ಕಡಿದರೆ ಆತನ ವಿರುದ್ಧ ಪ್ರಕರಣ ದಾಖಲಿಸುತ್ತೇವೆ ಎಂದರೆ ಸರಿ. ಅದೇ ರೀತಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ಯಾವುದೇ ಅನುಮತಿಯಿಲ್ಲದೆ ಪ್ರವೇಶ ಮಾಡಿದರೆ ವನ್ಯ ಜೀವಿ ಸಂರಕ್ಷಣಾ ಅಧಿನಿಯಮದಡಿಯಲ್ಲಿ ಪ್ರಕರಣ ದಾಖಲಿಸುತ್ತೇವೆ ಎಂದರೆ ಸರಿ. ಆರೋಪಿಗಳ ವಿರುದ್ಧ ಕರ್ನಾಟಕ ಅರಣ್ಯ ಸಂರಕ್ಷಣಾ ಅಧಿನಿಯಮದಡಿಯಲ್ಲಾಗಲಿ ಅಥವಾ ವನ್ಯ ಜೀವಿ ಸಂರಕ್ಷಣಾ ಅಧಿನಿಯಮದಡಿಯಲ್ಲಾಗಲಿ ಪ್ರಕರಣ ದಾಖಲಿಸಿರುವುದಿಲ್ಲ. ಮುದ್ದೆ ಮಾಲು-1 ನ್ನು ಸಾಮಾನ್ಯವಾಗಿ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುವಾಗ ಅಡ್ಡಲಾಗಿ

ಬೆಳೆದಿರುವ ಗಿಡಗಳನ್ನು ತೆಗೆಯಲು ನೀಡುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಅರಣ್ಯ ಪ್ರದೇಶಕ್ಕೆ ಪ್ರವೇಶ ಮಾಡಿ ಯಾವುದೇ ಮರಗಳನ್ನು ಕಡಿದಿಲ್ಲ ಮತ್ತು ಯಾವುದೇ ರೀತಿ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**